# 11ನೇ ವರ್ಷದ ಸಂಭ್ರಮದಲ್ಲಿ ಗೋಪಾಲ್ಸ್




ದೇಸಿ ಹಸುವಿನ ಉಳಿವಿಗಾಗಿ ಕಾರ್ಯನಿರ್ವಹಿಸುತ್ತಿರುವ ಗೋಪಾಲ್ಸ್ ತಂಡದ ಕುರಿತು ಈ ಹಿಂದೆ ಇದೇ ಅಂಕಣದಲ್ಲಿ ವಿವರಿಸಲಾಗಿದೆ. ಇತ್ತೀಚೆಗಷ್ಟೇ ಇದರ 11ನೇ ವಾರ್ಷಿಕೋತ್ಸವವನ್ನು ಬೆಂಗಳೂರಿನ ಚೌಡಯ್ಯ ಸ್ಮಾರಕ ಭವನದಲ್ಲಿ ಆಚರಿಸಲಾಯಿತು. ಇದರಲ್ಲಿ ಏನು ವಿಶೇಷ ಎನ್ನುತ್ತೀರಾ? ಹನ್ನೊಂದು ವರ್ಷಗಳ ಹಿಂದೆ ರಾಮಸುಬ್ರಮಣ್ಯಮ್ ಎನ್ನುವ ಒಬ್ಬ ಐಟಿ ಉದ್ಯೋಗಿ ಬೆಂಗಳೂರು ಹೊರವಲಯದ ಮಾಲೂರು ಬಳಿಯ ಶ್ರೀ ರಾಮಚಂದ್ರಾಪುರ ಮಠದ ಶ್ರೀ ರಾಘವೇಂದ್ರ ಗೋಶಾಲೆಗೆ ವಾರಾಂತ್ಯದಲ್ಲಿ ಭೇಟಿಕೊಟ್ಟು ಏಕಾಂಗಿ ಗೋಸೇವೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ರಾಮ್ ಅವರನ್ನು ನೋಡಿ ಅವರ ಸಹೋದ್ಯೋಗಿ ಮಿತ್ರರು ಕ್ರಮೇಣವಾಗಿ ಅವರ ದಾರಿ ಹಿಡಿದರು. ಹೀಗೆ ಹುಟ್ಟಿದ್ದು ಗೋಪಾಲ್ಸ್ (GoPals)–Friends of cow for creating awareness and application of desi cows)

ವಾರಾಂತ್ಯಗಳಲ್ಲಿ ಮೋಜು ಮಸ್ತಿ ಮಾಡುವ ಬದಲು ಗೋಶಾಲೆಗಳಿಗೆ ಭೇಟಿಕೊಡುವುದು, ಕೊಟ್ಟಿಗೆಯಲ್ಲಿ ಸಗಣಿ ಬಾಚುವುದರಿಂದ ಹಿಡಿದು ಹಸುಗಳ ಮೈ ತೊಳೆಯುವುದು, ಗೋ ಪೂಜೆ ಮಾಡುವುದು, ಗವ್ಯೋತ್ಪನ್ನಗಳನ್ನು ಬಳಸುವುದು ಹೀಗೇ ಗೋಶಾಲೆಯ ಹಲವು ಚಟುವಟಿಕೆಗಳಲ್ಲಿ ಭಾಗಿಯಾಗುವುದು ಗೋಪಾಲ್ಸ್ ತಂಡದ ವಿಶೇಷ.

ಅಷ್ಟಕ್ಕೂ ನಾಟಿಹಸು ಮತ್ತು ಸೀಮೆಹಸುಗಳಿಗಿರುವ ವ್ಯತ್ಯಾಸವೇನು? ನಾಟಿಹಸುವಿನ ಹಾಲನ್ನೇ ಏಕೆ ಕುಡಿಯಬೇಕು, ಕೃಷಿಯಲ್ಲಿ ನಾಟಿಹಸುವಿನ ಸಗಣಿ, ಗಂಜಲದ ಮಹತ್ವ ತಿಳಿಯಲು ನೀವೂ ಗೋಪಾಲ್ಸ್ ತಂಡದ ಯಾವುದಾದರೂ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸಬೇಕು. ರೈತರ ಬಳಿ ಹಸುಗಳು ಉಳಿಯಬೇಕೆಂದರೆ ಕೇವಲ ಹಾಲನ್ನು ನಂಬಿದರೆ ಸಾಲದು. ಏಕೆಂದರೆ ಹಸುಗಳು ನಿರ್ದಿಷ್ಟ ಅವಧಿಯಲ್ಲಿ ಮಾತ್ರ ಹಾಲು ನೀಡುತ್ತವೆ. ನಂತರವೂ ಹಸುಗಳನ್ನು ರೈತರು ಸಾಕಬೇಕೆಂದರೆ ಹಸುವಿನ ಸಗಣಿ, ಗಂಜಲ ಬಳಸಿ ವಿವಿಧ ರೀತಿಯ ಗವ್ಯೋತ್ಪನ್ನಗಳನ್ನು ಸಿದ್ಧಪಡಿಸಬೇಕು ಅಥವಾ ಗೋಮಯ ಗೊಬ್ಬರವನ್ನು ಕೃಷಿಯಲ್ಲಿ ಬಳಸಬೇಕು. ಆಗ ಮಾತ್ರ ಆರ್ಥಿಕವಾಗಿ ರೈತರಿಗೆ ಲಾಭ ಎಂಬ ಸತ್ಯ ತಿಳಿಸುವುದಕ್ಕಾಗಿ ಗೋಪಾಲ್ಸ್ ತಂಡ ಸಾರ್ವಜನಿಕರಲ್ಲಿ ದೇಸಿ ಹಸುವಿನ ಮಹತ್ವದ ಕುರಿತು ಅರಿವು ಮೂಡಿಸಲು ಹನ್ನೊಂದು ವರ್ಷಗಳಲ್ಲಿ ಸಾವಿರಾರು ಕಾರ್ಯಕ್ರಮಗಳನ್ನು ಆಯೋಜಿಸಿರುವುದು ಈಗ ಇತಿಹಾಸ. ಒಬ್ಬ ವ್ಯಕ್ತಿಯಿಂದ ಪ್ರಾರಂಭವಾದ ಕಾರ್ಯ ಇಂದು 5 ಲಕ್ಷಕ್ಕೂ ಹೆಚ್ಚು ಜನರನ್ನು ತಲುಪಿ ಇಂದು ರಾಷ್ಟ್ರಮಟ್ಟದ ಸಂಘಟನೆಯಾಗಿ ಬೆಳೆದಿರುವುದು ಸಾಮಾನ್ಯ ಸಂಗತಿಯಲ್ಲ. ಗೋಪಾಲ್ಸ್ ತಂಡದ ಹನ್ನೊಂದನೇ ವಾರ್ಷಿಕೋತ್ಸವ Music2HEAL(Good Health, pollution free Environment, Poison free Agriculture and sustainable Lifestyle)ವನ್ನು ಹೇಗೆ ಆಚರಿಸಲಾಯಿತು, ಇದರಿಂದ ರೈತರಿಗೆ ಮತ್ತು ಸಾರ್ವಜನಿಕರಿಗೆ ಏನೆಲ್ಲಾ ಅನುಕೂಲ ಎಂದು ತಿಳಿಯೋಣ.



**ಸಂದೀಪ್ ಮಂಜುನಾಥ್**
ಎಂ.ಎಸ್ಸಿ. ಕೃಷಿ, ಹುಣಸೂರು

### ಗೋಮಾತೆಯ ದರ್ಶನ ಪಡೆದು ಸಭಾಂಗಣಕ್ಕೆ ಪ್ರವೇಶ

ಸುಮಾರು 1200 ಮಂದಿ ಆಸಕ್ತ ಗೋ ಪ್ರೇಮಿಗಳು ಮುಂಗಡವಾಗಿ ಟಿಕೆಟ್ ಕಾಯ್ದಿರಿಸಿ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಮುಖ್ಯದ್ವಾರದಿಂದ ವೇದಿಕೆಯವರೆಗೆ ದೇಸಿ ಹಸುವಿನ ಮಹತ್ವ ಸಾರುವ ಮತ್ತು ಪರಿಸರ ಉಳಿಸಲು ನಾವು ಏನೆಲ್ಲಾ ಮಾಡಬಹುದು ಎನ್ನುವ ಮಾಹಿತಿ ಫಲಕಗಳು ಎಲ್ಲರನ್ನು ಆಕರ್ಷಿಸಿದವು. ವಿಶೇಷವಾಗಿ ನಾಟಿ ಹಸು ಮತ್ತು ಕರುವಿಗೆ ಗೋ ಪೂಜೆ ಮಾಡಿಸಲಾಯಿತು. ಪ್ರತಿಯೊಬ್ಬರೂ ಭಕ್ತಿ ಭಾವದಿಂದ ಗೋಮಾತೆಯ ಆಶೀರ್ವಾದ ಪಡೆದು ಒಳಪ್ರವೇಶಿಸಿದರು.

### ದೇಸಿ ಗೋವಿನ ಮಹತ್ವ ತಿಳಿಸಿದ ಪ.ಪೂ ಪೇಜಾವರ ಶ್ರೀಗಳು

ಕಾರ್ಯಕ್ರಮಕ್ಕೆ ಉಡುಪಿಯ ಪ.ಪೂ ಪೇಜಾವರ ಶ್ರೀಗಳು ದಿವ್ಯ ಸಾನಿಧ್ಯವಹಿಸಿ ಗೋಮಾತೆ ನಮ್ಮ ತಾಯಿ, ಅವಳು ನೀಡಿದ ಹಾಲು ಕುಡಿದು ನಾವು ಬೆಳೆದಿದ್ದೇವೆ. ನಂದಿಗಳು ನಮ್ಮ ತಂದೆಗೆ ಸಮಾನ, ಅವುಗಳು ಉಳಿಮೆ ಮಾಡಿದ ಭೂಮಿಯಿಂದ ನಮಗೆ ತಿನ್ನಲು ಅನ್ನ, ಉಡಲು ವಸ್ತ್ರ, ಭೂಮಿಗೆ ಗೊಬ್ಬರ ಎಲ್ಲವೂ ಸಿಗುತ್ತಿದೆ. ಇಷ್ಟೆಲ್ಲಾ ಉಪಯೋಗ ಗೋವುಗಳಿಂದ ಪಡೆಯುವ ನಾವು ಪ್ರತಿನಿತ್ಯ ಆಹಾರ

ಸೇವಿಸುವ ಮೊದಲು ಗೋ ಗ್ರಾಸಕ್ಕಾಗಿ ನಮ್ಮ ಶಕ್ತ್ಯಾನುಸಾರ ಒಂದಿಷ್ಟು ಹಣ ಎತ್ತಿಡಬೇಕು. ನಗರದಲ್ಲಿ ಹಸು ಸಾಕಲು ಆಗದಿದ್ದರೂ ಕನಿಷ್ಠ ಯಾರು ಗೋಪಾಲನೆ ಮಾಡುತ್ತಿದ್ದಾರೆ ಅಂತಹವರಿಗೆ ಸಹಾಯ ಮಾಡಬೇಕೆಂದು ತಿಳಿಸಿದರು.

## ಡಾ। ಪುಣ್ಯಮೂರ್ತಿ ಅವರಿಂದ ರೈತರಿಗೆ ಉಚಿತವಾಗಿ ನಾಟಿ ವೈದ್ಯ ಚಿಕಿತ್ಸೆ ತರಬೇತಿಗೆ ಅನುಮೋದನೆ

ಮೊದಲೆಲ್ಲಾ ಹಳ್ಳಿಗಳಲ್ಲಿ ಪಶುಗಳಿಗೆ ಕಾಯಿಲೆ ಆದಾಗ ಅಡುಗೆ ಮನೆಯಲ್ಲಿ ಇರುವ ಅರಿಶಿಣ, ಶುಂಠಿ, ಕರಿಮೆಣಸು, ವೀಳ್ಯದೆಲೆ ಮತ್ತಿತರ ಗಿಡಮೂಲಿಕೆಗಳಿಂದ ಪ್ರಥಮ ಚಿಕಿತ್ಸೆ ನೀಡುತ್ತಿದ್ದರು. ಆದರೆ ಇಂದು ಸಣ್ಣಪುಟ್ಟ ತೊಂದರೆಗಳಿಗೂ ಪಶುವೈದ್ಯರನ್ನು ಅವಲಂಬಿಸಿ ಅಲೋಪತಿ ಚಿಕಿತ್ಸೆ ನೀಡುತ್ತಿದ್ದೇವೆ. ಇದರಿಂದ ಸಾಕಷ್ಟು ಅಡ್ಡ ಪರಿಣಾಮಗಳಿವೆ. ಈ ಸಮಸ್ಯೆಯನ್ನು ಮನಗಂಡ ಗೋಪಾಲ್ಸ್ ತಂಡ ದೇಶದ ಖ್ಯಾತ ಪಶುವೈದ್ಯ ಅದರಲ್ಲೂ Ethno Veternary ವೈದ್ಯ ಅಂದರೆ ಪಾರಂಪರಿಕ ಪಶು ವೈದ್ಯಕೀಯ ಪದ್ಧತಿಯಲ್ಲಿ ತಮ್ಮದೇ ಛಾಪು ಮೂಡಿಸಿರುವ ಡಾ.ಪುಣ್ಯಮೂರ್ತಿ ಅವರಿಂದ ಈಗಾಗಲೇ ಹಲವು ಕಾರ್ಯಾಗಾರಗಳನ್ನು ಏರ್ಪಡಿಸಿದೆ. ಮುಂದಿನ ದಿನಗಳಲ್ಲಿ ದೇಸಿ ಗೋಸಾಕುವವರಿಗೆ ಉಚಿತವಾಗಿ ನಾಟಿವೈದ್ಯ ಪದ್ಧತಿಯ ತರಬೇತಿಯ ಜೊತೆಗೆ ಸಣ್ಣಪುಟ್ಟ ಕಾಯಿಲೆಗಳನ್ನು ಗುಣಪಡಿಸುವ ನಾಟಿವೈದ್ಯದ ಮೂಲಿಕಗಳಿರುವ ಕಿಟ್ ವಿತರಿಸಲು ಒಡಂಬಡಿಕೆ ಮಾಡಿಕೊಳ್ಳಲಾಯಿತು. ಹನ್ನೊಂದನೇ ವರ್ಷದ ಈ ಸಂಭ್ರಮಾಚರಣೆಯಲ್ಲಿ ಸಂಗ್ರಹವಾಗಿರುವ ಹಣವನ್ನು ಈ ಕಾರ್ಯಕ್ಕೆ ಬಳಸಲು ನಿರ್ಧರಿಸಲಾಯಿತು. ಗೋಶಾಲೆಗಳು ಮತ್ತು ಸಾವಯವ ಕೃಷಿಕರ ಉತ್ಪನ್ನಗಳಿಗೆ "ಗೋಚೇತನ" ಹೆಸರಿನಲ್ಲಿ ಮಾರುಕಟ್ಟೆ ಸೃಷ್ಟಿಮಾಡಿ ಗೋಮಯ ಮತ್ತು ಗೋಮೂತ್ರಗಳಿಂದ ತಯಾರಾಗುವ ಧೂಪ, ದಂತ ಮಂಜನ, ತುಪ್ಪ, ಪಾತ್ರೆ ತೊಳೆಯುವ ಪುಡಿ, ಕುಂಕುಮ, ಸಾಬೂನು ಸೇರಿ ನಿತ್ಯ ಬಳಕೆ ವಸ್ತುಗಳನ್ನು ಗೋಪಾಲ್ಸ್ ಬ್ರಾಂಡ್ ಅಡಿಯಲ್ಲಿ ಮಾರಾಟ ಮಾಡುವ ವ್ಯವಸ್ಥೆಗೆ ಚಾಲನೆ ನೀಡಲಾಯಿತು.
ಈ ರೀತಿ ಗವ್ಯೋತ್ಪನ್ನಗಳನ್ನು ಬಳಸಿ ಸಾವಯವ ಕೃಷಿಕರ ಮತ್ತು ಗೋಶಾಲೆಗಳ ಆರ್ಥಿಕಮಟ್ಟ ಸುಧಾರಿಸುವುದು ಗೋಚೇತನ ಕಾರ್ಯಕ್ರಮದ ಉದ್ದೇಶವಾಗಿದೆ.

## ಗೋಕಥಾಮೃತಮ್ ಮತ್ತು ಬಾಲ ಗೋಕಥಾಮೃತಮ್ ಪುಸ್ತಕಗಳ ಲೋಕಾರ್ಪಣೆ

ಗೋಪಾಲ್ಸ್ ತಂಡದ ಮಹಿಳಾ ಕಾರ್ಯಕರ್ತರು ವಿಶೇಷವಾಗಿ ಮಕ್ಕಳಿಗಾಗಿ "ಬಾಲಗೋಕಥಾಮೃತಮ್" ಮತ್ತು ಸಾರ್ವಜನಿಕರಿಗಾಗಿ "ಗೋಕಥಾಮೃತಮ್" ಎನ್ನುವ 2 ಪುಸ್ತಕಗಳನ್ನು ಹೊರತಂದಿದ್ದಾರೆ. ಭಾರತೀಯ ಇತಿಹಾಸ ಪುರಾಣಗಳಲ್ಲಿ ಉಲ್ಲೇಖವಿರುವ ಗೋಮಾತೆಯ ಮಹಿಮೆ ಸಾರುವ ಘಟನೆಗಳನ್ನು ಕಥೆಗಳ ರೂಪದಲ್ಲಿ ವಿವರಿಸಲಾಗಿದೆ. ಎರಡೂ ಪುಸ್ತಕಗಳ ಕೊನೆಯಲ್ಲಿ ಎಲ್ಲರಿಗೂ ಉಪಯೋಗವಾಗುವ 'KYC' ಕುರಿತು ಸಾಕಷ್ಟು ಮಾಹಿತಿಯಿದೆ. ಗೋವಿಗೂ KYCಗೂ ಏನು ಸಂಬಂಧ ಎಂದು ನೀವು ಪ್ರಶ್ನಿಸಬಹುದು. ಗೋಪಾಲ್ಸ್ ತಂಡದಲ್ಲಿ KYC ಎಂದರೆ 'Know your cow' ಎಂದು. ನಮ್ಮ ದೇಶದಲ್ಲಿ ಪ್ರತಿಯೊಂದು ಭೌಗೋಳಿಕ ಪ್ರದೇಶಕ್ಕೆ ಅದರದೇ ಆದ ಸ್ಥಳೀಯ ಗೋ ತಳಿಗಳಿವೆ. ಸ್ವಾತಂತ್ರ್ಯ ಪೂರ್ವದಲ್ಲಿ ಸುಮಾರು 105 ಭಾರತೀಯ ತಳಿಗಳಿದ್ದವು. ಆದರೆ ಆಧುನಿಕತೆಯಿಂದ ಇಂದು ಕೇವಲ 33–35 ತಳಿಗಳು ಮಾತ್ರ ಉಳಿದಿವೆ. ನಾವುಗಳು ಇನ್ನೂ ಮೈ ಮರೆತರೆ ಉಳಿದಿರುವ ತಳಿಗಳು ನಶಿಸಿ ಹೋಗುವ ಸಂಭವವಿದೆ. ಹಾಗಾಗಿ ಜನರಿಗೆ ತಮ್ಮ ಭಾಗದ ಗೋವು ಯಾವುದು ಎಂದು ತಿಳಿಸುವ ಚಿತ್ರಗಳು ಮತ್ತು ಅದಕ್ಕೆ ತಕ್ಕ ಅಡಿ ಬರಹ ಪುಸ್ತಕದಲ್ಲಿ ಅಡಕವಾಗಿದೆ. ಉದಾ: ಮೈಸೂರು ಬೆಂಗಳೂರು ತುಮಕೂರು ಭಾಗದಲ್ಲಿ ಹಳ್ಳಿಕಾರ್ – ಅಮೃತಮಹಲ್, ಮಲೆನಾಡಿಗೆ ಮಲೆನಾಡು ಗಿಡ್ಡ, ಉತ್ತರ ಕರ್ನಾಟಕಕ್ಕೆ ದೇವಣಿ, ಕಿಲಾರಿ ಹೀಗೆ ಆಯಾಭಾಗಕ್ಕೆ ಅನುಗುಣವಾಗಿ ಹೊಂದಿಕೊಳ್ಳುವ ಸ್ಥಳೀಯ ಗೋವಿನ ಮಾಹಿತಿ ನೀಡಲಾಗಿದೆ. ಪ್ರತಿ ಪುಟದಲ್ಲೂ Did you Know ಎನ್ನುವ ಪ್ರಶ್ನೆಗಳ ಮೂಲಕ ಗೋವಿನ ಬೇರೆ ಬೇರೆ ಉಪಯೋಗಗಳ ಕುರಿತು ಗಮನ ಚೆಲ್ಲಲಾಗಿದೆ.

## GPS–Gou Pooja as a Service

ಸನಾತನ ಧರ್ಮದಲ್ಲಿ ಗೋ ಪೂಜೆಗೆ ಬಹಳ ಮಹತ್ವವಿದೆ. ಮನೆ ಗೃಹಪ್ರವೇಶದ ಸಮಯದಲ್ಲಿ ಕಾಮಧೇನು ಒಳಪ್ರವೇಶಿಸಿದ ನಂತರವೇ ನಾವು ಆ ಮನೆಯಲ್ಲಿ ವಾಸಮಾಡುತ್ತೇವೆ. ಆದರೆ ನಗರಗಳಲ್ಲಿ ನಾಟಿ ಹಸು ಹುಡುಕಿ ತರುವುದು ಬಹಳ ಕಷ್ಟದ ಕೆಲಸ. ಈ ಸಮಸ್ಯೆಗೆ ಪರಿಹಾರವಾಗಿ ಗೋಪಾಲ್ಸ್ ತಂಡ ಬೆಂಗಳೂರು ನಗರದ ಸಾರ್ವಜನಿಕರಿಗೆ ಅನುಕೂಲವಾಗಲೆಂದು GPS ಸೇವೆ ಪ್ರಾರಂಭಿಸಿದೆ. ಗೋಪಾಲ್ಸ್ ತಂಡದ ಸಕ್ರಿಯ ಕಾರ್ಯಕರ್ತ ಶಿವಕುಮಾರ್ (ಸಂಪರ್ಕ ಸಂಖ್ಯೆ 9611809686) ಈ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಶ್ರೀಯುತರು ಹೊಸಕೋಟೆ ಸಮೀಪ ನಾಟಿ ಹಸುಗಳ ಗೋಶಾಲೆ ನಡೆಸುತ್ತಿದ್ದಾರೆ. ಸಾಗಾಣಿಕೆ ಮತ್ತು ಚಾಲಕನ ವೆಚ್ಚ ನೀಡಿದರೆ ಸಾಕು, ದೇಸಿ ತಳಿಯ ಹಸು ಮತ್ತು ಕರುವನ್ನು ಮನೆ ಬಾಗಿಲಿಗೆ ಕರೆತರುತ್ತಾರೆ. ಇದರಿಂದ ಸಾಮಾನ್ಯರೂ ದೇಸಿ ಗೋ ಪೂಜೆ ಮಾಡಲು ಅನುಕೂಲವಾಗಲಿದೆ.

## ನಾಟಿ ಹಸು ಸಾಕುವವರಿಗೆ ಸನ್ಮಾನ

ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರದ ಕೆಲ ದೇಸಿ ಹಸು ಸಾಕುವವರಿಗೆ ಗೌರವ ಸೂಚಿಸಲಾಯಿತು. ಈ ಎಲ್ಲರೂ ಆಯಾ ಪ್ರಾಂತದ ತಳಿಯ ಗೋವುಗಳನ್ನು ಸಾಕುತ್ತಿದ್ದು ಸ್ಥಳೀಯ ದೇಸಿ ಗೋ ಸಂತತಿಯ ಉಳಿವಿಗೆ ಶ್ರಮಿಸುತ್ತಿದ್ದಾರೆ.
7G's for successful life: ಜಗದ್ವಿಖ್ಯಾತ ಹರಿಕಥೆ ಕಲಾವಿದೆಯಾದ ವಿದುಷಿ ಶ್ರೀಮತಿ ವಿಶಾಖ ಹರಿ ಅವರಿಂದ ವಿಶೇಷ ಹರಿಕಥೆ ಏರ್ಪಡಿಸಿದ್ದು ಗಮನಾರ್ಹವಾಗಿತ್ತು.
**ಯಶಸ್ವಿ ಜೀವನಕ್ಕಾಗಿ 7Gs:** ಗುರು–ಗಾಯತ್ರಿ–ಗೋವಿಂದ–ಗೀತಾ–ಗಂಗಾ–ಗೋಮಾತಾ–ಗಯಾ

ಎಲ್ಲವನ್ನೂ ಮನಮುಟ್ಟುವ ಸಂಗೀತದೊಂದಿಗೆ ಸುಂದರವಾಗಿ ಸಂಯೋಜಿಸಲಾಗಿತ್ತು. ಸಾರ್ವಜನಿಕರು ಹಾಗೂ ಪ್ರತಿಷ್ಠಿತ ವ್ಯಕ್ತಿಗಳು ಕಾರ್ಯಕ್ರಮದಲ್ಲಿ ಭಾಗಿಯಾಗಿ ಗೋಮಾತೆಯ ಕೃಪೆಗೆ ಪಾತ್ರರಾದರು. ಗೋಪಾಲ್ಸ್ ತಂಡದ ಸದಸ್ಯರಾಗಲು ಮತ್ತು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ +91 99005 96080